


ನಾವೊಂದು ತೊಟ್ಟು ರಕ್ತ ಹೀರುವುದು ಇವರಿಗೆ ಸಹಿಸಲಿಕ್ಕಾಗುವುದಿಲ್ಲ. ಆದರೆ ಅವರು ಒಬ್ಬರ ರಕ್ತವನ್ನು ಒಬ್ಬರು ಕುಡಿಯುತ್ತಾರೆ. ಕಂದಮ್ಮಗಳ ಬಗ್ಗೆ ಕೂಡ ಇವರಿಗೆ ಕನಿಕರವಿಲ್ಲ. ಹೀಗೆ ಯುದ್ಧ ಮಾಡಿ ಮನುಷ್ಯ ಕುಲವೇ ನಾಶವಾದರೆ ನಮ್ಮ ಹೊಟ್ಟೆ ಪಾಡೇನು ಎಂದು ನಮಗೆ ಆಗಾಗ ಚಿಂತೆಯಾಗುತ್ತಿದೆ.

ಡೆಂಗಿಯ ಕಾರಣ ಮನೆ ಸುತ್ತಲು ಎಲ್ಲೂ ನೀರು ನಿಲ್ಲದಂತೆ, ಸ್ವಚ್ಛವಾಗಿಟ್ಟುಕೊಳ್ಳಲು ದಿನಾಲು ಟೀವಿಯವರು ಊಳಿಡುತ್ತಿದ್ದಾರೆ. ಹಾಗಾದರೆ ನಾವು ಬಾಳಿ ಬದುಕುವುದೆಲ್ಲಿ? ನಮ್ಮ ಸಂಸಾರ ಸಾಗಿಸುವುದೆಲ್ಲಿ, ಸಂತಾನೋತ್ಪತ್ತಿ ಹೇಗೆ, ಮನೆ ಒಳಗೂ ಬರಲು ಬಿಡುವುದಿಲ್ಲ, ಕಿಟಕಿ ಬಾಗಿಲುಗಳಿಗೆ ಮೆಶ್ ಹಾಕಿ ನಾವು ಒಳಗೆ ಬರದಂತೆ ತಡೆ ಒಡ್ಡುತ್ತಾರೆ. ಹೊರಗೂ ಅವಕಾಶ ಇಲ್ಲ. ನಮ್ಮಂಥ ಯಃಕಶ್ಚಿತ್ ಜೀವಿಯನ್ನು ಮನುಷ್ಯ ಸಂಹರಿಸಲು ಪಡುವ ಪಾಡನ್ನು ನೋಡಿ ತಮಾಷೆ ಎನಿಸುತ್ತದೆ. ನಾವು ಈಗ ಮೊದಲಿನಂತೆ ಗುಂಯಿಗುಡುವಂತಿಲ್ಲ, ಕಣ್ಣಿಗೆ ಬೀಳುವಂತಿಲ್ಲ, ಬಹಳ ಹೊಂಚು ಹಾಕಿ ಹೊಟ್ಟೆ ಹೊರೆಯಬೇಕು. ನಾವು ಮೊದಲು ವಾಸವಾಗಿದ್ದ ಆ ಚರಂಡಿ ಪಕ್ಕದ ಮನೆಗಳೇ ಚೆನ್ನಾಗಿದ್ದವು. ಮನೆಯಲ್ಲಿ ಜನರೂ ಬಹಳ, ನಮ್ಮ ಆಹಾರಕ್ಕೆ ಕೊರತೆ ಇರಲಿಲ್ಲ. ನಮ್ಮ ಬಗ್ಗೆ ಅವರಿಗೆ ಸ್ವಲ್ಪ ಅನುಕಂಪ ಇತ್ತು. ನಮ್ಮ ವಾಸಕ್ಕೆ, ಸಂತಾನ ವೃದ್ಧಿಗೆ ಬಹಳ ಸೂಕ್ತ ಸ್ಥಳ ಅದು. ಮನೆಗಳಲ್ಲಿ ಪ್ರವೇಶಕ್ಕೆ ಅಲ್ಲಿ ಅಡ್ಡಿ ಆತಂಕಗಳಿರಲಿಲ್ಲ. ಆ ಮನೆಗಳಲ್ಲಿ ಟೀವಿ ಇರಲಿಲ್ಲ ಅಷ್ಟೇ. ನಮ್ಮಲ್ಲಿ ಕೆಲವರ ಮಾತು ಕೇಳಿ ಇಂಥ ದೊಡ್ಡ ಮನೆಗಳಿಗೆ ಬಂದೆವು. ಇಲ್ಲಿ ಮನೆ ದೊಡ್ಡದು, ದೊಡ್ಡ ಮನೆಯಲ್ಲಿ ಹಾರಾಡಿಕೊಂಡಿರಬಹುದು. ಆದರೆ ಮನೆಗಳಲ್ಲಿ ಮನುಷ್ಯರು ಕಡಿಮೆ. ಮನೆಗಳಲ್ಲಿ ನಮ್ಮನ್ನು ಸಂಹರಿಸಲು ಅನೇಕ ಆಯುಧಗಳನ್ನು ಇವರು ಇಟ್ಟುಕೊಂಡಿದ್ದಾರೆ. ನಮ್ಮ ಬಳಗದ ಇನ್ನೂ ಕೆಲವರು ಪಕ್ಕದ ಮಹಡಿ ಮನೆಗಳಿಗೆ ಹೋದರು. ಅಲ್ಲೂ ಹಾಗೆ ಎಂದು ಅಲ್ಲಿಂದ ಬಂದ ಕೆಲವು ದಾಯಾದಿಗಳು ಹೇಳುತ್ತಿದ್ದರು... ಭಾರೀ ಎತ್ತರದಲ್ಲಿರುವ ಮೇಲಿನ ಮನೆಗಳಿಗೆ ಹೋಗಲು ಲಿಫ್ಟ್ ಬಳಸಿ ಮನುಷ್ಯರೊಂದಿಗೆ ಹೋಗಬೇಕು. ತುಂಬಾ ರಿಸ್ಕ್ ಅಲ್ಲಿಂದ ಕೆಳಗೆ ಬರುವಂತಿಲ್ಲ, ನೋಡುವಂತಿಲ್ಲ, ಸಂತಾನ ವೃದ್ದಿಗೆ ಅಲ್ಲಿ ಅವಕಾಶವೇ ಇಲ್ಲವಂತೆ!

ನಮ್ಮನ್ನು ಹಣಿಯಲು ಮನುಷ್ಯ ಏನೆಲ್ಲ ಕರಾಮತ್ತು ಮಾಡುತ್ತ ಬಂದ. ಮೊದಲು ಸೊಳ್ಳೆ ಪರದೆ ಕಟ್ಟಿಕೊಂಡು ನಮ್ಮನ್ನು ದೂರ ಇಡಲು ಪ್ರಯತ್ನಿಸಿದ. ನಂತರ ಮನೆಯಲ್ಲಿ ಹೊಗೆ ಹಾಕಿ ಮನೆಯಿಂದ ಆಚೆ ಅಟ್ಟಲು ನೋಡಿದ. ಅದನ್ನೂ ನಾವು ಸಹಿಸಿಕೊಂಡು ಹೊರಗೆ ಹೋಗಿ ಸಮಯ ಸಾಧಿಸಿ ಮತ್ತೆ ಮನೆ ಒಳಗೆ ಸೇರಿಕೊಂಡು, ಸೊಳ್ಳೆ ಪರದೆಯೊಳಗೆ ತೂರಿಕೊಂಡು ಸಾಕಷ್ಟು ತ್ಯಾಗ– ಬಲಿದಾನಗಳ ಮೂಲಕ ಬದುಕುತ್ತಾ ಬಂದೆವು. ನಮ್ಮ ವಂಶ ಮುಂದುವರಿಯಿತು. ನಂತರ ಸುರಳಿಯಾಕಾರದ ಹೊಗೆ ಹಿಡಿಸುವ ಸಾಧನಗಳನ್ನು ತಂದ. ಇನ್ನೇನೊ ಬಣ್ಣಬಣ್ಣದ ಉಪಕರಣಗಳನ್ನು ತಂದು ನಮ್ಮನ್ನು ಹೆದರಿಸಿದ. ನಾವು ಕಚ್ಚಬಾರದೆಂದು ತನ್ನ ಮೈಗೆ ಲೇಪನಗಳನ್ನು ಬಳಿದುಕೊಂಡ. ಇತ್ತೀಚೆಗೆ ರಾತ್ರಿಯೆಲ್ಲ ಒಂದು ದ್ರಾವಣವನ್ನು ಉರಿಸುತ್ತಿದ್ದಾನೆ. ಇವೆಲ್ಲ ತಾತ್ಕಾಲಿಕ. ಇವುಗಳಿಗೆಲ್ಲ ನಾವು ಒಗ್ಗಿ ಹೋಗಿದ್ದೇವೆ. ಟೀವಿಗಳಲ್ಲಿ ನಮ್ಮನ್ನು ಕ್ಷಣಾರ್ಧದಲ್ಲಿ ಸಾಯಿಸಿ ಕೊಲ್ಲುವಂಥದ್ದು ಏನೇನೋ ತೋರಿಸುತ್ತಾರೆ.